


International Journal of Kannada Research
www.kannadajournal.com

**ISSN: 2454–5813**
IJKR 2018; 4(1): 95-97
© 2018 IJKR
www.kannadajournal.com
Received: 22-11-2017
Accepted: 26-12-2017

ಡಾ. ಚಂದ್ರಾ ವತಿ ಶೆಟ್ಟಿ
ಸಹ ಪ್ರಾಧ್ಯಾಪಕರು, ಶ್ರೀ ಶಾರದಾ ಕಾಲೇಜು.ಬಸ್ರೂರು, ಕರ್ನಾಟಕ, ಭಾರತ

**Correspondence**
ಡಾ. ಚಂದ್ರಾ ವತಿ ಶೆಟ್ಟಿ
ಸಹ ಪ್ರಾಧ್ಯಾಪಕರು, ಶ್ರೀ ಶಾರದಾ ಕಾಲೇಜು.ಬಸ್ರೂರು, ಕರ್ನಾಟಕ, ಭಾರತ

# ಕುಂದಗನ್ನಡ ಜನಪದ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ ಅಭಿವ್ಯಕ್ತಿ

ಡಾ. ಚಂದ್ರಾ ವತಿ ಶೆಟ್ಟಿ

**ಪೀಠಿಕೆ**

ಒಂದು ಸಮಾಜದ ಪ್ರಮುಖ ಸಂಸ್ಥೆ ಕುಟುಂಬ. ಸಂತತಿಯ ಉತ್ಪತ್ತಿ ಮತ್ತು ಶಿಶುಗಳ ಪಾಲನೆ ಪೋಷಣೆಯ ಕಾರ್ಯಗಳನ್ನು ನಿರ್ವಹಿಸುವುದರ ಸಲುವಾಗಿ ಲೈಂಗಿಕ ಸಂಬಂಧದ ಆಧಾರದ ಮೇಲೆ ರಚಿತವಾದ, ಸಾಕಷ್ಟು ಖಚಿತವಾದ ಮತ್ತು ದೀರ್ಘಕಾಲ ಬಾಳುವ ಸಮೂಹವೇ 'ಕುಟುಂಬ'. ಇಂತಹ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಯು ನಾನಾ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಮೊಟ್ಟ ಮೊದಲಿಗೆ ಇಬ್ಬರೂ ಅಪರಿಚಿತ ಅಥವಾ ಬೇರೆ ಬೇರೆ ಭಾವನೆಗಳ ಪ್ರವೃತ್ತಿಗಳ ಸಂಗಮವಾಗಿ ಕುಟುಂಬ ಕಾಣಿಸುತ್ತದೆ. ಆಮೇಲೆ ಮಕ್ಕಳು -ಮರಿ ಪಾಲನೆ -ಪೋಷಣೆ ಹೀಗೆ ಅನೇಕ ಜವಾಬ್ದಾರಿಗಳು ಬರುತ್ತದೆ. ಕುಟುಂಬದಲ್ಲಿ ಮಹಿಳೆಯರು ಗಂಡು ಎಂಬ ಬೇರೊಬ್ಬ ವ್ಯಕ್ತಿಯೊಡನೆ ಸಂಪೂರ್ಣವಾಗಿ ಸೇರಿಕೊಂಡು ತನ್ನತನವನ್ನೇ ಆತನಿಗೆ ಅರ್ಪಿಸಿ ಕುಟುಂಬದಲ್ಲಿ, ಸಂಸಾರದಲ್ಲಿ ಲೀನವಾಗಿ ತನ್ನ ವ್ಯಕ್ತಿತ್ವವೇ ಇಲ್ಲ ಎಂಬಂತೆ ತನ್ನ ಬದುಕನ್ನು ಸಾರ್ಥಕ ಮಾಡಿಕೊಳ್ಳುತ್ತಾಳೆ.

ಕುಂದಗನ್ನಡ ಜನಪದ ಸ್ತ್ರೀಯರ ಸಂಸಾರಿಕ ಜೀವನದ ಬಗ್ಗೆ ಹೇಳಬೇಕೆಂದರೆ, ಹೊರ ಜಗತ್ತಿನ ಅರಿವು ಕುಂದಗನ್ನಡ ಜನಪದ ಸ್ತ್ರೀಗೆ ಇಲ್ಲವಾದರೂ, ಸಂಸಾರದಲ್ಲಿ ತನ್ನದೇ ಆದ ಶ್ರೇಷ್ಠ ಲೋಕವನ್ನು ಆಕೆ ಕಂಡುಕೊಂಡಿದ್ದಾಳೆ. ಜೀವನದಲ್ಲಿ ತಾನು ಅನುಭವಿಸಿದ ಕಷ್ಟ-ಕಾರ್ಪಣ್ಯಗಳನ್ನು ಕಂಡು ಕತ್ತಲೆ- ಬೆಳಕನ್ನು ತನ್ನದೇ ಆದ ಸಾಹಿತ್ಯದ ಮುಖಾಂತರ ಹೇಳಿಕೊಂಡಿದ್ದಾಳೆ. ತಾನು ಜೀವನದಲ್ಲಿ ಜಿಗುಪ್ಸೆಗೊಂಡ ಕ್ಷಣಗಳನ್ನು ಅರಗಿಸಿಕೊಂಡ ನೋವಿನ ವಿರುದ್ಧದ ಆಕ್ರೋಶವನ್ನು ತನ್ನದೇ ಆದ ಸಾಹಿತ್ಯದ ಮುಖಾಂತರ ಹೊರ ಸೂಸಿರುತ್ತಾಳೆ.

ಕುಂದಗನ್ನಡ ಜನಪದ ಸ್ತ್ರೀ ತನ್ನ ಕೌಟುಂಬಿಕ ಬದುಕಿನಲ್ಲಿ ಮಗಳಾಗಿ, ತಾಯಿಯಾಗಿ, ಸೊಸೆಯಾಗಿ, ಹೆಂಡತಿಯಾಗಿ, ಅತ್ತೆಯಾಗಿ, ಬಂಜೆಯಾಗಿ, ವಿಧವೆಯಾಗಿ ಕಂಡು ಬರುವಳು. ಮಗಳಾಗಿ, ತಾಯಿಯಾಗಿ, ಸೊಸೆಯಾಗಿ ಪುರುಷರ ಬದುಕನ್ನು ನಿಯಂತ್ರಿಸುವ ಅವಳ ಪಾತ್ರ ಹಿರಿದು. ಇವೆಲ್ಲ ವಾತ್ಸಲ್ಯ ತಂತುಗಳ ಹಿನ್ನೆಲೆಯಲ್ಲಿ ತನ್ನ ತಾಯಿ, ತಂದೆ, ಗಂಡ, ಮಕ್ಕಳು, ಒಡಹುಟ್ಟಿದವರ ಬಗ್ಗೆ ಭಾವುಕತೆಯ ಪರಾಕಾಷ್ಠೆಯಲ್ಲಿ ಧ್ವನಿ ಎತ್ತರಿಸಿ ಹಾಡಿರುವ ಗೀತೆಗಳು ಕುಂದಗನ್ನಡ ಜನಪದದಲ್ಲಿ ಸಾಕಷ್ಟು ಇವೆ. ನೂರಾರು ತೊಂದರೆಗಳನ್ನು ಇಲ್ಲಿಯ ಜನಪದ ಸ್ತ್ರೀ ಅನುಭವಿಸಿದ್ದು ಅದೆಲ್ಲಾ ಆಕೆಯ

ದೃಷ್ಟಿಯಲ್ಲಿ ಬದುಕಿನ ಸಾರ್ಥಕತೆಗಾಗಿ. ಆದ್ದರಿಂದಲೇ ತನ್ನ ಕೌಟುಂಬಿಕ ಬದುಕಿನಲ್ಲಿ ಬದುಕಿನ ನೂರಾರು ನೋವು ನಂಜನ್ನು ನುಂಗಿಕೊಂಡು ನಂಜುಂಡ ಆಗಿರುವುದು. ಆದರ್ಶದ ಹೆಸರಿಗಾಗಿ ತನ್ನತನವನ್ನೆಲ್ಲ ಕಡಿದು ಚೂರು ಚೂರು ಮಾಡಿ ಪುರುಷ ಸಮಾಜಕ್ಕೆ ಕೊಟ್ಟಿರುವಳು. ಕುಟುಂಬದಲ್ಲಿರುವವರ ಆಶೆ ಆಕಾಂಕ್ಷೆಗಳನ್ನು ಪೂರೈಸುತ್ತಾ, ಅವರೆಲ್ಲರೂ ಕೊಟ್ಟ ನೋವನ್ನು ನುಂಗುತ್ತ ಬಾಳಿದರು ಅಲ್ಲಿ ಏನು ಸಿಗದಿದ್ದಾಗ ---

"ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ ಹುಟ್ಟಿ ಮಣ್ಣಿನ್ಮೇಲೊಂದು ಮರವಾಗಿ ಹುಟ್ಟಿದರ
ಬಂದವರಿಗೆಲ್ಲ ನೆರಳಾದೆ." ಈ ರೀತಿಯಾಗಿ ನೋವಿನಿಂದ ಹಾಡಿಕೊಳ್ಳುವಳು

ಶಿಷ್ಠ ಸಮಾಜದಂತೆ ಕುಂದಗನ್ನಡ ಜನಪದ ಸಮಾಜದಲ್ಲಿಯೂ ಪುರುಷರಿಂದಲೇ ವ್ಯಾಖ್ಯಾನಿಸಲ್ಪಟ್ಟ ಸ್ತ್ರೀ ಪುರುಷರ ಜೈವಿಕ ವ್ಯತ್ಯಾಸವು ಮಾನಸಿಕ ಅವಸ್ಥೆಯನ್ನು ಹತ್ತಿಕ್ಕತೊಡಗಿದವು. ಕುಟುಂಬದಲ್ಲಿ ಪುರುಷರ ಸ್ಥಾನ ಮೇಲೆ ಸ್ತ್ರೀಯರ ಸ್ಥಾನ ಕೆಳಗೆ ಎನ್ನಲಾಯಿತು. ಪುರುಷರ ಬಲವನ್ನು ಪೌರುಷವೆಂಬ ಹೆಸರಿನಲ್ಲಿ ವೈಭವೀಕರಿಸಿದ ವ್ಯವಸ್ಥೆ ಸ್ತ್ರೀಯರ ಸಂತಾನ ಶಕ್ತಿಯನ್ನು ಅದೇ ದೃಷ್ಟಿಕೋನದಿಂದ ನೋಡಲಿಲ್ಲ. ಸ್ತ್ರೀಯರು ಪುರುಷರ ಕಣ್ಣುಗಳ ಮೂಲಕ ತಮ್ಮನ್ನು ಕಂಡುಕೊಂಡರು. ಕುಟುಂಬದಲ್ಲಿ ಪುರುಷ ಬದುಕನ್ನು ಅನುಭೋಗಿಸಿದರೆ, ಸ್ತ್ರೀ ತಾಯಿಯಾಗಿ, ಹೆಂಡತಿಯಾಗಿ, ಪ್ರೇಯಸಿಯಾಗಿ ಪುರುಷನಿಗಾಗಿ ಬದುಕಬೇಕಾಯಿತು.ಇದೇ ರೀತಿಯ ಬದುಕು ಇಲ್ಲಿಯ ಸ್ತ್ರೀಗೆ ರೂಢಿ ಆಯಿತು. ಆದರೆ ಸ್ತ್ರೀ ತನ್ನಿಂದ ಸೆಳೆದುಕೊಳ್ಳಲ್ಪಟ್ಟಿದ್ದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವುದು ನಿರಂತರವಾಗಿ ನಡೆಯಿತು. ಈ ಅಭಿಲಾಷೆ ಆಂತರ್ಯದಲ್ಲಿ ಜೀವಂತವಾಗಿರುವ ಕಾರಣದಿಂದಲೇ ಪುರುಷ ನಿರ್ದೇಶಿತ ಸಮಾಜದಲ್ಲಿ ಬದುಕಿಯು ಸ್ತ್ರೀ ಮಣ್ಣುಗೂಡಿ ಹೋಗಲಿಲ್ಲ. ತನ್ನಲ್ಲಿರುವ ಸ್ವಾತಂತ್ರ್ಯ ಅಭಿಲಾಷೆಯನ್ನು, ಕಳೆದು ಹೋದ ಹಕ್ಕನ್ನು ಒಮ್ಮೆ ನೋವಿನ ನೆರಳುವಿಕೆಯಿಂದ, ಇನ್ನೊಮ್ಮೆ ದೇವರ ಮೊರೆ ಹೋಗುವ ಮೂಲಕ, ಮತ್ತೊಮ್ಮೆ ತ್ಯಾಗದ ಮೂಲಕ, ಮಗದೊಮ್ಮೆ ಸಿಡಿದೇಳುವ ಮೂಲಕ ಜನಪದ ಸಾಹಿತ್ಯ ಮಾಧ್ಯಮದಲ್ಲಿ ಅಭಿವ್ಯಕ್ತಿ ಗೊಳಿಸಿಕೊಂಡಿದ್ದಾಳೆ.

ಕುಂದಗನ್ನಡ ಜನಪದ ಸಾಹಿತ್ಯದಲ್ಲಿ ದಾಖಲೆಗೊಂಡಂತೆ ಸ್ತ್ರೀಗೆ ಸಂಬಂಧಿಸಿದ ಎರಡು ಕುಟುಂಬಗಳೆಂದರೆ ಅಪ್ಪನ ಮನೆ ಹಾಗೂ ಗಂಡನ ಮನೆ ಈ ಎರಡು ಕುಟುಂಬಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯಿದ್ದು ಸಾಮಾನ್ಯವಾಗಿ ಗಂಡು ಮನೆಯ ಹಿರಿತನದಲ್ಲಿರುತ್ತಾನೆ ಸ್ತ್ರೀ ತವರಿನಲ್ಲಿ ಮಗಳಾಗಿ ತಂಗಿಯಾಗಿ, ಅಕ್ಕನಾಗಿ, ಅತ್ತಿಗೆ, ನಾದಿನಿಯಾಗಿ, ತಾಯಿಯಾಗಿ ತನ್ನ ಜೀವನಾವರ್ತನದ ಚಕ್ರವನ್ನು ಎರಡು ಕುಟುಂಬಗಳಲ್ಲಿ ಮುಗಿಸುತ್ತಾಳೆ. ಒಂದರ್ಥದಲ್ಲಿ ಮದುವೆಯು ಹೆಣ್ಣಿಗೆ ವಿಶೇಷವಾದ ಬಂಧನವನ್ನು ನಿರ್ಮಿಸುತ್ತದೆ. ಈ ಮದುವೆಯು ಹೆಂಡತಿಯನ್ನು ಮಾತ್ರ ಲೈಂಗಿಕ ಬಂಧನ ಸೇರಿದಂತೆ ಹಲವು ರೀತಿಯಲ್ಲಿ ಬಂಧನದಲ್ಲಿರುವ ಏಕ ಪಕ್ಷಿಯ ಕಾನೂನಾಗಿ, ಗಂಡನಿಗೆ ಸಾಕಷ್ಟು ಸ್ವಾತಂತ್ರವನ್ನು ಕೊಟ್ಟು ಅದನ್ನು ಹೆಣ್ಣಿನಿಂದ ಪೂರ್ಣವಾಗಿ ಕಸಿದುಕೊಂಡಿದೆ.

"ಕಡಗ ಕಾಲುಂಗುರ ನಮಗಿಡುಂಗಾಯ್ತುಡದಮ್ಮನ ಬಿಟ್ಟು ಬರುವಾಗ ನಮ್ಮ ಕಣ್ಣೀರು ತಡೆದು
ಮಳೆಯಾಗಿಸುರಿಯಿತು."

ಈ ಕಡಗ ಕಾಲುಂಗುರಗಳನ್ನು ಧರಿಸಿ ವಿವಾಹ ಬಂಧನ ಕೊಳಗಾಗುವುದಕ್ಕಾಗಿ ಸ್ತ್ರೀ ತೆರುವ ಬೆಲೆ, ಹಡೆದ ತಾಯನ್ನೇ ಬಿಟ್ಟು ಹೊರಡಬೇಕಾದ ಅಸಹ್ಯ ತ್ಯಾಗದ ಯಾತನೆ ಯನ್ನು ಅವಳು ಅನುಭವಿಸಬೇಕು. ವ್ಯವಸ್ಥೆಯ ಈ ಪದ್ಧತಿಯನ್ನು ತಾಯಿ ಮಗಳು ಇಬ್ಬರು ಕಣ್ಣೀರಿನ ಮೂಲಕ ಈ ರೀತಿಯಾಗಿ ಪ್ರತಿಭಟಿಸಿದರು.

ಒಂಬತ್ತು ತಿಂಗಳು ನಿನ ತುಂಬಿಕೊಂಡು ತಿರುಗೇನ ಹಂಬಲಿಸಿ ನಿನ್ನ
ಹಡೆದೇನ ಚಿತ್ತರದ ಗೊಂಬೆ ನಿನ್ನೊಪ್ಪಿಸಿಕೊಡಲ್ಯಾಂಗ.

ಕುಂದಗನ್ನಡ ಜನಪದ ಸ್ತ್ರೀಯರ ಬದುಕಿನಲ್ಲಿ ಮದುವೆಯ ಸಂಪ್ರದಾಯವು, ಆಕೆಯ ಬದುಕಿನ ಸ್ಥಿತಿಗತಿಯಲ್ಲಿ ಯಾವ ವ್ಯತ್ಯಾಸವನ್ನು ಮಾಡಿಲ್ಲ. ಮದುವೆಯನ್ನು ಪವಿತ್ರ ಎಂದಲ್ಲ ಹೇಳಲಾಗಿದ್ದರು ಮಹಿಳೆಯರ ಬದುಕಿನ ಸ್ಥಿತಿಯನ್ನೇನೂ ಅದು ಸುಧಾರಿಸಿಲ್ಲವೆಂದು ಹೇಳಬಹುದು.

ಹೇಗೆ ಪುರುಷ ಪ್ರಧಾನ ಸಂಸ್ಕೃತಿಯಲ್ಲಿಯ ಕುಟುಂಬ ವ್ಯವಸ್ಥೆಯ ಮೌಲ್ಯಗಳನ್ನು ಮಗಳಿಗೆ ಬೋಧಿಸುವ ತಾಯಿಯಾಗಿ, ಸೊಸೆಯಿಂದ ಮೌಲ್ಯಗಳಿಗೆ ಹೊಂದುವಂತಹ ಆಚರಣೆಯನ್ನು ಬಯಸುವ ಅತ್ತೆಯಾಗಿ, ಸ್ತ್ರೀಯರ ಬದುಕಿಗೆ

ವಿರುದ್ಧವಾದ ಮೌಲ್ಯಗಳನ್ನು ಇನ್ನೊಂದು ಸ್ತ್ರೀ ಎತ್ತಿ ಹಿಡಿಯಬೇಕಾದ ದುರಂತ ಇಲ್ಲಿಯ ಜನಪದದಲ್ಲಿದೆ. ಪುರುಷ ಯಜಮಾನ ಛತ್ರದಡಿ ಬದುಕಿದಾಗ ಗಂಡಂದಿರು ತಮ್ಮ ಸ್ವೇಚ್ಛಾಚಾರ ಹಾಗೂ ಹೆಂಡತಿಯೊಂದಿಗೆ ಅಮಾನವೀಯ ನಡವಳಿಕೆಗಳಿಂದ ಅವರ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದರು. ಇದನ್ನು ಅಭಿವ್ಯಕ್ತಿಸುವ ವಿವರಗಳು ಕುಂದಗನ್ನಡ ಜನಪದ ಸಾಹಿತ್ಯದಲ್ಲಿ ಹೇರಳವಾಗಿದೆ.

> "ಗಂಡ ಉತ್ತಮನೆಂದು ಬಂದು ಕುಂದ್ರಬೇಡ ಮಂದೀಯ ಬಿಟ್ಟು ನಗಬೇಡ :ಎಲೆ ಬಾಲಿ ಗುಂಡಿಗೆ ಹಿಡಿ ಅವಎದೆಯೊಳಗ ಪುರುಷರೊಳ್ಳವರಂದೇ ಸರಸಾನಾಡದೀರ ಬರಸುಂಟೀ ಅವರ ಎದಿಯಲ್ಲೇ ತಿಂಗೀನಾ ಕೊನಿಯ ಕಡ್ವಂಗೆಕಡ್ವರ".

ಕುಂದಗನ್ನಡ ಜನಪದ ಸ್ತ್ರೀಯರು ಕುಟುಂಬ ವ್ಯವಸ್ಥೆಯಲ್ಲಿ ಪುರುಷರ ಸೊಳೆಗಾರಿಕೆಯ ಬಗ್ಗೆ ಮಿಶ್ರ ಪ್ರತಿಕ್ರಿಯೆ ತೋರಿರುತ್ತಾರೆ. ತನ್ನ ಜೀವನದ ಜೀವಸೆಲೆಯೇ ಬತ್ತಿ ಹೋಗುವಂತಹ, ಕೌಟುಂಬಿಕ ನೆಮ್ಮದಿಯೇ ಕದಡಿ ಹೋಗುವಂತಹ ಸಂದರ್ಭಗಳಲ್ಲಿ ಸ್ತ್ರೀಯರ ಗಂಡಸರ ಲೈಂಗಿಕ ಸ್ವಾತಂತ್ರ್ಯವನ್ನು ತೀವ್ರವಾಗಿ ವಿರೋಧಿಸಿದ್ದಾರೆ.

ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿನ ಏಕ ಪಕ್ಷೀಯ ನ್ಯಾಯ ನಿರ್ಣಯ ಪದ್ಧತಿಯನ್ನು ಪ್ರತಿಭಟಿಸಿ ಗೆದ್ದಿರುವ ಸ್ತ್ರೀಯರು ಕುಂದಗನ್ನಡ ಜನಪದದಲ್ಲಿ ಕಾಣ ಸಿಗುತ್ತಾರೆ. ಕುಂದಗನ್ನಡ ಜನಪದದಲ್ಲಿ ರಚಿತಗೊಂಡಿರುವ ಪುರಲಕ್ಕಿ ಕಥೆಯೇ ಇದಕ್ಕೆ ನಿದರ್ಶನವಾಗಿದೆ.

> ಒಟ್ಟಿನಲ್ಲಿ ಕುಂದಗನ್ನಡ ಜನಪದ ಸ್ತ್ರೀಗೆ ಕುಟುಂಬವೇ ಅವಳ ಪಾಲಿನ ಹಿರಿಯ ಜಗತ್ತು. ಇಂತಹ ಜಗತ್ತಿನಲ್ಲಿ ಹೊಂದಾಣಿಕೆ, ಪ್ರೀತಿ, ಸಹನೆ ಮೊದಲಾದ ಸೂತ್ರಗಳನ್ನು ಹಿಡಿದು' ಈಸಬೇಕು ಇದ್ದು ಜಯಿಸಬೇಕು' ಎಂದುಕೊಳ್ಳುವಳು.

ಗ್ರಂಥ ಋಣ

1. 'ನಮ್ಮ ಹೆಣ್ಣು ಮಗು' ಲೇ. ಗಾಯಿತ್ರಿ ನಾವಡ ಪ್ರಕಟಣೆ: ಆನಂದ ಪ್ರಕಾಶನ ಮಂಗಳೂರು. ೧೯೯೨.
2. 'ಕರಾವಳಿಯ ಜನಪದ ಕತೆ ಗಳು.' ಲೇ: ಗಾಯಿತ್ರಿ ನಾವಡ ಪ್ರಕಟಣೆ: ಆನಂದ ಪ್ರಕಾಶನ. ಮಂಗಳೂರು ೧೯೯೯.
3. ಕೈಲಿ ಕರೆದು ನೊರೆ ಹಾಲು' ಗುಂಡ್ಮಿ ಚಂದ್ರಶೇಖರ ಐತಾಳ. ಪ್ರಕಟಣೆ: ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ೧೯೮೪.